11-00 AM

ಅಧ್ಯಕ್ಷರು: ಪ್ರಶ್ನೋತ್ತರವನ್ನು ಪ್ರಾರಂಭ ಮಾಡೋಣ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಒಂದು ನಿಲುವಳಿ ಸೂಚನೆ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು ಬರುತ್ತಿದ್ದಾರೆ.

ಅಧ್ಯಕ್ಷರು: ಪ್ರಶ್ನೋತ್ತರ ಮುಗಿಯಲಿ. ಪ್ರಶ್ನೋತ್ತರ ಮುಗಿದ ಮೇಲೆ ಅದರ ಬಗ್ಗೆ ವಿಚಾರ ಮಾಡೋಣ. ಇವತ್ತು 15 ಜನ ಮಾನ್ಯ ಸದಸ್ಯರುಗಳು ಪ್ರಶ್ನೆ ಕೇಳಿದ್ದಾರೆ. ನೀವೇ ಒಂದೊಂದು ಸಾರಿ ಪ್ರಶ್ನೋತ್ತರ ಹೋಗಿದೆ ಎಂದು ಹೇಳುತ್ತೀರಿ. ಪ್ರಶ್ನೋತ್ತರಕ್ಕೆ ಮೊದಲು ಆದ್ಯತೆ ಕೊಡಲೇ ಬೇಕು. ನಂತರ ನಿಲುವಳಿ ಸೂಚನೆ ಬಗ್ಗೆ ನೀವು ಏನು ಪ್ರಸ್ತಾಪ ಮಾಡಬೇಕು ಮಾಡಿ.

ಶ್ರೀ ಆರ್. ಧ್ರುವನಾರಾಯಣ್: ಮಾನ್ಯ ಅಧ್ಯಕ್ಷರೆ, ವಿದ್ಯುಚ್ಛಕ್ತಿಯ ಸಮಸ್ಯೆ ಬಹಳ ಇದೆ. ನಿಲುವಳಿ ಸುಚನೆ ತೆಗೆದುಕೊಂಡರೆ ಒಳ್ಳೆಯದು.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರ ಆದ ಮೇಲೆ ಅವಕಾಶ ಕೊಡಬೇಕು. ಬಹಳ ಸೀರಿಯಸ್ ಆದ ವಿಚಾರ ಇದೆ.

ಅಧ್ಯಕ್ಷರು: ನಿಮ್ಮ ನಿಮ್ಮ ನಾಯಕರುಗಳು ಬರಲಿ. ಆಮೇಲೆ ಅದರ ಬಗ್ಗೆ ಪ್ರಸ್ತಾಪ ಮಾಡಿ. ಮೊದಲು ಪ್ರಶ್ನೋತ್ತರವನ್ನು ತೆಗೆದುಕೊಳ್ಳೋಣ. ನಾಡಗೌಡ ವೆಂಕಟರಾವ್‌ರವರು.

1. ಪ್ರಶ್ನೋತ್ತರ

ಆ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳನ್ನು ತುಂಬುವುದು.

27 (127) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)
ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್, ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು)

ಅ) ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆ ಎಷ್ಟು; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಖಾಲಿ ಇರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಗಳು-29

ತಾಲ್ಲೂಕುವಾರು ವಿವರ

ಕ್ರ ಸಂ.	ತಾಲ್ಲೂಕು	ಗ್ರೇಡ್-1	ಗ್ರೇಡ್-2	ಒಟ್ಟು
1	ರಾಯಚೂರು	7	0	7

2	ಮಾನ್ವಿ	6	0	6
3	ದೇವದುರ್ಗ	4	1	5
4	ಲಿಂಗಸೂಗೂರು	2	0	2
5	ಸಿಂಧನೂರು	9	0	9
ಒಟ್ಟು		28	1	29

ಆ) ಹಾಗಿದ್ದಲ್ಲಿ, ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗ ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಇ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಇರುವ ಮಾನದಂಡಗಳೇನು; (ವಿವರಗಳನ್ನು ನೀಡುವುದು);

ಚಾಲ್ತಿಯಲ್ಲಿರುವ ನಿಯಮಾಗಳನುಸಾರ ಗ್ರೇಡ್–1 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದಲ್ಲಿ ಶೇಕಡಾ 20 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮೂಲಕ, ಶೇಕಡಾ 20 ರಷ್ಟು ಹುದ್ದೆಗಳನ್ನು ಕಂದಾಯ ಇಲಾಖೆಯಿಂದ ನಿಯೋಜನೆ ಮೂಲಕ ಮತ್ತು ಶೇಕಡಾ 60 ರಷ್ಟು ಹುದ್ದೆಗಳನ್ನು ಗ್ರೇಡ್–2 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದ ನೌಕರರಿಗೆ ಬಡ್ತಿ ನೀಡುವ ಮುಖಾಂತರ ತುಂಬಲಾಗುವುದು.

ಚಾಲ್ತಿಯಲ್ಲಿರುವ ನಿಯಮಗಳನುಸಾರ ಗ್ರೇಡ್–2 ಗ್ರಾಮ ಪಂಚಾಯಿತಿ ಕಾರ್ಯದರ್ಶಿ ವೃಂದದ ಶೇಕಡಾ 60 ರಷ್ಟು ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಮತ್ತು ಶೇಕಡಾ 40 ರಷ್ಟು ಹುದ್ದೆಗಳನ್ನು ಗ್ರಾಮ ಪಂಚಾಯಿತಿ ಸಿಬ್ಬಂದಿ ವರ್ಗದ ಬಿಲ್ ಕಲೆಕ್ಟರ್ ಇತ್ಯಾದಿ ವೃಂದದ ನೌಕರರಿಂದ ನೇಮಕಾತಿ ಮಾಡುವುದರ ಮೂಲಕ ತುಂಬಲಾಗುವುದು.

ಈ) ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿರುವ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆ ಎಷ್ಟು;

ಸಿಂಧನೂರು ತಾಲ್ಲೂಕಿನಲ್ಲಿ ಮಂಜೂರಾದ ಗ್ರಾ.ಪಂ. ಕಾರ್ಯದರ್ಶಿಗಳ ಒಟ್ಟು ಹುದ್ದೆ 34.

ಉ) ಅವುಗಳಲ್ಲಿ ಖಾಲಿ ಇರುವ ಹುದ್ದೆ ಗಳನ್ನು ಯಾವಾಗ ಭರ್ತಿ ಮಾಡಲಾಗುವುದು;

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗ ಈಗಾಗಲೇ ಅಧಿಸೂಚನೆ ಹೊರಡಿಸಿದ್ದು, ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಊ) ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕಾಲಮಿತಿಯನ್ನೇನಾದರೂ ವಿಧಿಸಿದೆಯೇ? (ವಿವರಗಳನ್ನು ನೀಡುವುದು)

– ಇಲ್ಲಾ –

ಶ್ರೀ ನಾಡಗೌಡ ವೆಂಕಟರಾವ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ನಮ್ಮ ಜಿಲ್ಲೆಯಲ್ಲಿ ಒಟ್ಟು 29 ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಹುದ್ದೆಗಳು ಖಾಲಿ ಇವೆ. ನನ್ನ ಕ್ಷೇತ್ರವಾದ ಸಿಂಧನೂರಿನಲ್ಲಿ 9 ಹುದ್ದೆಗಳು ಖಾಲಿ ಇವೆ. ಎರಡು ಮೂರು ಪಂಚಾಯಿತಿಗಳಿಗೆ ಒಬ್ಬೊಬ್ಬರು ಕಾರ್ಯದರ್ಶಿಗಳನ್ನು ನೇಮಕ ಮಾಡಿ ಕೆಲಸ ನಿರ್ವಹಿಸಬೇಕಾದ ಪರಿಸ್ಥಿತಿ ಇದೆ. ಇವತ್ತಿಗೂ ಕೂಡ ನನ್ನ ಸ್ವಂತ ಕ್ಷೇತ್ರದ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಗಳನ್ನು ನೇಮಕ ಮಾಡುವುದಕ್ಕಾಗಲಿಲ್ಲ. ಯರನ್ನಾದರೂ ಒಬ್ಬರನ್ನು ಡೆಪ್ಯುಟೇಷನ್ ಮೇಲೆ ಹಾಕುವುದಕ್ಕೆ ಕೂಡ ಅಲ್ಲಿಯ ಸ್ಥಳೀಯ EO ಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ನೀವು ಇಷ್ಟು ಕಾರ್ಯದರ್ಶಿಗಳ ಹುದ್ದೆಗಳನ್ನು ಖಾಲಿ ಇಟ್ಟರೆ ಕಷ್ಟವಾಗುತ್ತದೆ. ಒಂದೊಂದು ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ನೀವು ಪಂಚಾಯಿತಿಗಳಿಗೆ ಕೊಡುತ್ತೀರಿ. ಅಲ್ಲಿ ಏನು ಕೆಲಸ ಮಾಡುವುದಕ್ಕೂ ಕೂಡ ಸಾಧ್ಯವಾಗುತ್ತಿಲ್ಲ. ಅದರ ಜೊತೆಯಲ್ಲಿ ಚೆಕ್ ನೀಡುವ ಅಧಿಕಾರವನ್ನು ಕೂಡ ಅಧ್ಯಕ್ಷರುಗಳಿಗೆ ಕೊಟ್ಟು ಬಿಟ್ಟಿದ್ದೀರಿ. ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಏನು ಮಾಡುತ್ತಾರೆಂದು ಯಾರಿಗೂ ಕೂಡ ಗೊತ್ತಾಗುತ್ತಿಲ್ಲ. ಕಾರ್ಯದರ್ಶಿಗಳನ್ನು ಕರೆದು ಕೇಳಬೇಕೆಂದರೂ ಕೂಡ ಎರಡು ಮೂರು ಪಂಚಾಯಿತಿಗಳಿಗೆ ಸೇರಿಸಿ ಒಬ್ಬೊಬ್ಬರು ಕಾರ್ಯದರ್ಶಿಗಳನ್ನು ನೇಮಕ ಮಾಡಿದ್ದಾರೆ. ಹಾಗಾಗಿ ನಮಗೆ ತೊಂದರೆಯಾಗುತ್ತಿದೆ. ಯಾವಾಗ ತುಂಬುತ್ತೀರಿ ಎಂದರೆ, ಉತ್ತರದಲ್ಲಿ ಲೋಕಸೇವಾ ಆಯೋಗದಿಂದ ಅಧಿಸೂಚನೆ ಹೊರಡಿಸಿದ್ದೇವೆಂದು ಹೇಳುತ್ತಾರೆ. ಲೋಕಸೇವಾ ಆಯೋಗದಿಂದ ನೇಮಕಾತಿ ಪ್ರಕ್ರಿಯೆ ಮುಗಿದು ಬರುವುದರೊಳಗೆ ಈ ಪಂಚಾಯಿತಿಗಳು ಪೂರ್ಣ ಹದಗೆಟ್ಟು ಹೋಗುತ್ತವೆ. ಕೂಡಲೇ ಏನಾದರೂ ವ್ಯವಸ್ಥೆ ಮಾಡದೇ ಇದ್ದರೆ ತೊಂದರೆಯಾಗುತ್ತದೆ. ಹೊಸದಾಗಿ ಸುವರ್ಣ ಗ್ರಾಮಗಳನ್ನು ಬೇರೆ ಕೊಟ್ಟಿದ್ದೀರಿ....

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ಪೂರಕವಾಗಿ ಪ್ರಶ್ನೆ ಕೇಳಿ. ಉಳಿದದ್ದು ಎಲ್ಲವನ್ನೂ general ಆಗಿ ಕೇಳುವುದಕ್ಕೆ ಹೋದರೆ ಆಗುವುದಿಲ್ಲ. ಏನು ಮಾಡಬೇಕೆಂದು specific ಸಜೆಷನ್ ಕೊಡಿ. ಏನು ಆಗಬೇಕೆಂದು ಕೇಳಿ, ಅವರ ಕಡೆಯಿಂದ ಏನು ಉತ್ತರ ಬಯಸುತ್ತೀರಿ ಎಂದು ಕೇಳಿ.

ಶ್ರೀ ನಾಡಗೌಡ ವೆಂಕಟರಾವ್: ಅದಕ್ಕೇ ಕೇಳುತ್ತಿರುವುದು. ಜನರಿಗೆ ತೊಂದರೆಯಾಗುತ್ತಿದೆ. ತಾವು ಸ್ವಲ್ಪ ನಮಗೆ ರಕ್ಷಣೆ ಕೊಡಿ.

ಅಧ್ಯಕ್ಷರು: ಇದು ಪ್ರಶ್ನೋತ್ತರ. ಬಜೆಟ್ ಮೇಲೆ ಮತ್ತು ರಾಜ್ಯಪಾಲರ ಭಾಷಣೆ ಮೇಲೆ ಚರ್ಚೆ ಮಾಡುವಾಗ ಮಾತನಾಡಿ.

ಶ್ರೀ ನಾಡಗೌಡ ವೆಂಕಟರಾವ್: ನಾನು ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಅಲ್ಲಿ ಹುದ್ದೆಗಳು ಖಾಲಿ ಇದೆ. ಇದರಿಂದ ಕೆಲಸಗಳು ಆಗುವುದಿಲ್ಲವೆಂದು ಅವರ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ.

ಅಧ್ಯಕ್ಷರು: ಖಾಲಿ ಹುದ್ದೆ ಭರ್ತಿ ಮಾಡಲು ಮಾನದಂಡವೇನೆಂದು ಕೇಳಿದಿರಿ. ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬುತ್ತೀರಿ ಎಂದು ಕೇಳಿರಿ. ನೀವು ಕೇಳಿ. ಆದರೆ, ಅದಕ್ಕೆ time bound fix ಮಾಡಿಕೊಂಡು ಕೇಳಿ. Specific ಆಗಿ ಏನಾದರು ಕೇಳಿ.

ಶ್ರೀ ನಾಡಗೌಡ ವೆಂಕಟರಾವ್: ಅಧಿಸೂಚನೆ ಹೊರಡಿಸಿದ್ದೇವೆಂದು ಹೇಳಿದ್ದಾರೆ. ಅದರ ಮೂಲಕ ತುಂಬುವುದಕ್ಕೆ ಇನ್ನು ಬಹಳ ಸಮಯ ಹಿಡಿಯುತ್ತದೆ. ಆದ್ದರಿಂದ ನಮ್ಮ ಕೆಲಸಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಇದಕ್ಕೆ ಏನಾದರು ಬೇರೆ ವ್ಯವಸ್ಥೆಯನ್ನು ಮಾಡಿ ತುಂಬಿ ಕೊಟ್ಟರೆ ಕೆಲಸ ಮಾಡಲು ಅನುಕೂಲವಾಗುತ್ತದೆ ಎಂಬುದನ್ನು ತಮ್ಮ ಮೂಲಕ ಸಚಿವರನ್ನು ಕೇಳಬಯಸುತ್ತೇನೆ.

ಕು:ಶೋಭಾ ಕರಂದ್ಲಾಜೆ: ನಮ್ಮ ಇಲಾಖೆಯು 5.10.2007 ರಲ್ಲಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ 488 ಗ್ರಾಮ ಪಂಚಾಯಿತಿ ಕಾರ್ಯದರ್ಶಿಯವರನ್ನು ತುಂಬಬೇಕೆಂದು ಪ್ರಸ್ತಾವನೆಯನ್ನು ಕಳುಹಿಸಿತ್ತು. ಆದರೆ, ಆಯ್ಕೆ ಪ್ರಕ್ರಿಯ ಆರಂಭವಾಗಿರಲಿಲ್ಲ. ಈ ಬಾರಿ ನಮ್ಮ ಸರ್ಕಾರ ಬಂದ ಮೇಲೆ ಮತ್ತೆ ಪತ್ರವನ್ನು ಬರೆಯಲಾಗಿ, ಜನವರಿ 15 ರಂದು ಅವರು ನೋಟಿಫಿಕೇಷನ್‌ನ್ನು ಮಾಡಿದ್ದಾರೆ. 16.2.2009ರಂದು ಅರ್ಜಿ ತುಂಬಲು ಕೊನೆಯ ದಿನಾಂಕವಾಗಿದೆ. ಜೂನ್, 2009 ರಲ್ಲಿ ಈ ಪಂಚಾಯಿತಿ ಕಾರ್ಯದರ್ಶಿಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ ಎಂಬುದಾಗಿ ನಮಗೆ ಲೋಕಸೇವಾ ಆಯೋಗದವರು ತಿಳಿಸಿರುತ್ತಾರೆ. ಅಷ್ಟರವರೆಗೆ ಉಳಿದಂಥ ಗ್ರಾಮಪಂಚಾಯಿತಿಯ ಕಾರ್ಯದರ್ಶಿಗಳು ಯಾರಿದ್ದಾರೆ ಅವರಿಗೆ ಕಾರ್ಯನಿರ್ವಹಣೆ ಮಾಡುವುದಕ್ಕೆ ಹೇಳಿದ್ದೇವೆ. ಉತ್ತರದಲ್ಲಿ ತಿಳಿಸಿರುವಂತೆ, ಗ್ರೇಡ್-1 Officers ರಾಯಚೂರು ಜಿಲ್ಲೆಯಲ್ಲಿ 78 ಬ್:ಏಕಾಗಿದ್ದು ಅಲ್ಲಿ 28 ಹುದ್ದೆಗಳು ಖಾಲಿ ಇದೆ. ಗ್ರೇಡ್-2 Officers 86 ಬೇಕಾಗಿತ್ತು. ಆದರೆ ಅಲ್ಲಿ ಒಂದು ಹುದ್ದೆ ಮಾತ್ರ ಖಾಲಿ ಇದೆ. ಅಂದರೆ ಒಟ್ಟು 29 ಹುದ್ದೆಗಳು ಖಾಲಿ ಇದೆ. ಈಗಾಗಲೇ ಉತ್ತರದಲ್ಲಿ ತಿಳಿಸಿರುವಂತೆ ಲೋಕಸೇವಾ ಆಯೋಗ ನೇಮಕಾತಿ ಪ್ರಕ್ರಿಯೆಯನ್ನು ಆರಂಭ ಮಾಡಿದೆ. ನೇರ ನೇಮಕಾತಿ ಮಾಡಿಕೊಳ್ಳಲು ನಮಗೆ ಅವಕಾಶ ಕೊಡಿ, ನೀವು ನೇಮಕಾತಿ ಮಾಡುತ್ತಿಲ್ಲವೆಂದು ನಾವು ಅವರನ್ನು ಕೇಳಿದ್ದೆವು. ಆದರೆ, ಅವರು

ತಕ್ಷಣದಲ್ಲಿಯೇ ಆ ನೇಮಕಾತಿ ಪ್ರಕ್ರಿಯೆಯನ್ನು ಮಾಡುತ್ತೇವೆಂದು ಆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಜೂನ್ ಕೊನೆಯೊಳಗೆ ಈ ನೇಮಕಾತಿ ಪ್ರಕ್ರಿಯ ಪೂರ್ಣವಾಗುತ್ತದೆ.

ಶ್ರೀ ನಾಡಗೌಡ ವೆಂಕಟರಾವ್: ಜೂನ್‌ನಲ್ಲಿ ತುಂಬುವುದಾದರೆ ಇನ್ನೂ 4–5 ತಿಂಗಳುಗಳು ಹೋಗುತ್ತದೆ. ಆದ್ದರಿಂದ ಇನ್ನೂ ತೊಂದರೆಯಾಗುತ್ತದೆ. ದಯವಿಟ್ಟು ಏನಾದರು alternative ವ್ಯವಸ್ಥೆ ಮಾಡಿ. ನೀವು ಜನವರಿಯಲ್ಲಿ ಕರೆದಿರುವುದಕ್ಕೇ ಈಗಾಗಲೆ ಇಷ್ಟು ಡಿಲೇ ಆಗಿದೆ. ಇನ್ನು ಜೂನ್ ಎಂದರೆ ಇನ್ನೂ ಡಿಲೇ ಆಗುತ್ತದೆ. ಕೆಲಸಗಳು ಪೂರ್ತಿ ಹ್ಯಾಂಪರ್ ಆಗುತ್ತಿವೆ. ಅಲ್ಲಿ ಏನು ನಡೆಯುತ್ತಿದೆಯೆಂದು ಯಾರಿಗೂ ಗೊತ್ತಾಗಲಾರದ ಪರಿಸ್ಥಿತಿ ಇದೆ. ತಾವು ಏನಾದರೂ ಬೇರೆ ವ್ಯವಸ್ಥೆ ಮಾಡಿ, ವರ್ಗಾವಣೆ ಮಾಡುತ್ತೀರೋ, ಕಳುಹಿಸುತ್ತೀರೋ ಮಾಡಿ ಇದರಲ್ಲಿ 50–60 ಪರ್ಸೆಂಟ್ ತುಂಬದಿದ್ದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ದಯಮಾಡಿ ಏನಾದರು alternative ವ್ಯವಸ್ಥೆ ಮಾಡಿ. ಜೂನ್ ಆಗುತ್ತದೆಂದು ಹೇಳಿದ್ದಾರೆ. ಅದು ಜೂನ್ ಆಗಬಹುದು ಅಥವಾ ಇನ್ನೂ 2–3 ತಿಂಗಳು ಮುಂದೆ ಹೋಗಬಹುದು.

ಕು:ಶೋಭಾ ಕರಂದ್ಲಾಜೆ: ಈಗಾಗಲೆ ನೇಮಕಾತಿ ಪ್ರಕ್ರಿಯೆ ಆರಂಭವಾದ ಕಾರಣ ಮತ್ತೊಂದು alternative ವ್ಯವಸ್ಥೆಗೆ, ನಾಳೆ ನಾಡಿದ್ದು ಲೋಕಸಭೆಯ ಚುನಾವಣೆ ಘೋಷಣೆಯಾಗುತ್ತಿರುವ ಕಾರಣ, ನಾವು ಕಂದಾಯ ಇಲಾಖೆಯಲ್ಲಿ ಕೇಳಿದೆವು, ಆದರೆ ಎಲ್ಲಾ ಇಲಾಖೆಯಲ್ಲೂ ಸಿಬ್ಬಂದಿ ಕಡಿಮೆ ಇದ್ದಾರೆ. ಆ ಕಾರಣದಿಂದ ಬೇರೆ ಇಲಾಖೆಯಿಂದ deputation ತೆಗೆದುಕೊಳ್ಳುವುದು ಕಷ್ಟವಾಗಿದೆ. ಆದರೂ ಸಹ ಇದರ ಬಗ್ಗೆ ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ಬಾಲಕೃಷ್ಣರವರೆ ಮತ್ತು ಅಪ್ಪಾಸಾಹೇಬ್ ಪಟ್ಟಣಶೆಟ್ಟಿಯವರೆ ತಮ್ಮ ಪ್ರಶ್ನೆಗಳನ್ನು ಮಾನ್ಯರ ಸಚಿವರು ಬಂದಮೇಲೆ ತೆಗೆದುಕೊಳ್ಳುತ್ತೇನೆ. ಅವರು request ಮಾಡಿಕೊಂಡಿದ್ದಾರೆ.

ಪ್ರಶ್ನೆ ಸಂಖ್ಯೆ : 30 (317)

(ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು)